ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 06-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ತಂದೆ ನಿವೃತ್ತಿ ಆಗುವಾಗ ಬೇರೆ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ . ನನ್ನ ತಂದೆಗೆ ಶೇರ್ ಗಳಲ್ಲಿ ಆದಾಯ ಇತ್ತು. ನನ್ನ ತಂದೆಗೆ ಎಷ್ಟು ಶೇರ್ ಗಳು ಇದ್ದವು ಎಂದು ನೆನಪಿಲ್ಲ. ನನ್ನ ತಂದೆ ಐಟಿ ರಿಟನ್ಸ್ ಸಲ್ಲಿಸಿದ್ದು ಅದರಲ್ಲಿ ಶೇರ್ ಗಳ ಬಗ್ಗೆ ಕಾಣಿಸಿದ್ದರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ . ನನ್ನ ತಂದೆಗೆ ಶೇರ್ ಗಳಿಂದ ಆದಾಯ ಇತ್ತು ಎಂದು ನನ್ನ ತಂದೆ ಹೇಳಿದ ಮೇರೆಗೆ ನಾನು ಹೇಳುತಿದ್ದೇನೆ. ನನ್ನ ತಂದೆ 1994 ರಲ್ಲಿ ನಿವೃತ್ತಿ ಹೊಂದಿದರೂ ಕೂಡ 1998 ರಲ್ಲಿ Pension ಬರಲು ಪ್ರಾರಂಭವಾಯಿತು ಎಂದರೆ ನನಗೆ ತಿಳಿದಿಲ್ಲ . ಈ ಬಗ್ಗೆ ನಾನು ನನ್ನ ತಂದೆಯನ್ನು ಕೇಳಿಲ್ಲ . ನನ್ನ ತಂದೆಗೆ Pension ರೂ 6800/- ತಿಂಗಳಿಗೆ ಮಾತ್ರ ಬರುತ್ತಿತ್ತು ಎಂದರೆ ನನಗೆ ತಿಳಿದಿಲ್ಲ . ನನ್ನ ತಂದೆ ಮೃತಪಡುವ ಸಮಯದಲ್ಲಿ ಕೇವಲ ರೂ 7000/- ಮಾತ್ರ Pension ಬರುತಿತ್ತು ಎಂದರೆ ತಿಳಿದಿಲ್ಲ. ನನ್ನ ತಂದೆ ಸ್ವರ್ಣ ಲಕ್ಷೀ ಫೈನಾನ್ಸ್ ನಲ್ಲಿ ಸಾಲ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮಣಿಪಾಲ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಕೂಡ ಸಾಲ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ . ನನ್ನ ತಂದೆಗೆ, ಗೃಹ ಸಾಲ, provident fund ನ ಮೇಲೆ ಸಾಲ , ಚಿನ್ನಾಭರಣಗಳ ಮೇಲೆ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ನನ್ನ ತಂದೆಯ ಸಹಿಯನ್ನು ಪಡೆದು ಎಲ್ಲವೂ ನನ್ನ ಅಣ್ಣನೇ ಮಾಡುತಿದ್ದ ಎಂದು ತಿಳಿಸಿರುತ್ತಾರೆ . ನಿಮ್ಮ ತಂದೆಯ ಸಹಿಯನ್ನು ಒಂದನೇ ಪ್ರತಿವಾದಿಯೇ ಮಾಡುತಿದ್ದರಾ ಎಂದು ಕೇಳಿದ ಪ್ರಶ್ನೆಗೆ

ಸಾಕ್ಷಿ  ಸ್ವಲ್ಪ ಸಹಿಗಳನ್ನು ನನ್ನ ತಂದೆಯಿಂದ ಪಡೆಯುತಿದ್ದರು ಒಂದು ಒಂದು ಸಹಿಯನ್ನು ನನ್ನ ಅಣ್ಣನೇ ಮಾಡಿರುತಾನೆ ಅದೇ ರೀತಿ ತಾಯಿ ಸಹಿ ಕೂಡ ಮಾಡಿರುತ್ತಾನೆ . ನಾನು ನನ್ನ ಅಣ್ಣನ ವಿರುದ್ಧ ನಮ್ಮ ತಂದೆಯ ಸಹಿ ಮಾಡಿದಬಗ್ಗೆ ಮತ್ತು ನನ್ನ ತಾಯಿಯ ಸಹಿ ಮಾಡಿದ ಬಗ್ಗೆ ದೂರನ್ನು ಕೊಟ್ಟಿಲ್ಲ . ಸಾಕ್ಷಿ ಮುಂದುವರಿದು ನಮ್ಮ ತಂದೆ ಬದುಕಿದ್ದಾಗಲೇ  ನಮ್ಮ ಅಣ್ಣ ಎಲ್ಲವನ್ನು ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತಾರೆ. ನಮ್ಮ ತಂದೆ ಮತ್ತು ತಾಯಿಯ ಸಹಿಯನ್ನು ನನ್ನ ಅಣ್ಣ ಫೊಜ್ರರಿ ಮಾಡುತಿದ್ದ ಬಗ್ಗೆ ನಮ್ಮ ವಾದಪತ್ರದಲ್ಲಿ ತಿಳಿಸಿಲ್ಲ . ನನ್ನ ತಂದೆ ಎಷ್ಟು ಸಾಲ ಇತ್ತು ಎಂದು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ರಿಟನ್ಸ್ ನಲ್ಲಿ ಕಾಣಿಸಿದ್ದಾರೋ ಇಲ್ಲವೋ ಗೊತಿಲ್ಲ. ನಿಮ್ಮ ತಂದೆಯ ಆರ್ಥಿಕ ಪರಸ್ಥಿತಿಯ ಬಗ್ಗೆ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ನಮ್ಮ ತಂದೆಯ ಆರ್ಥಿಕ  ಪರಿಸ್ಥಿತಿ ಚೆನ್ನಾಗಿತ್ತು ಎಂದು ತಿಳಿಸಿರುತಾರೆ. ನನ್ನ ತಂದೆ ಸಿಂಡಿಕೇಟ್ ಬ್ಯಾಂಕ್ ನಲ್ಲಿ ಕೆಲಸ ದಲ್ಲಿ ಇರುವಾಗ ಗೃಹ ಸಾಲ ಮಾಡಿದ್ದರು ಎಂದರೆ ಗೊತ್ತಿಲ್ಲ. ನನ್ನ ತಂದೆ ನಿವೃತ್ತಿ ಆಗುವಾಗ  ಗೃಹ ಸಾಲ ಬಾಕಿ ಇತ್ತು ಎಂದರೆ  ತಿಳಿದಿಲ್ಲ . ನಿಮ್ಮ ತಂದೆಯ ಆರ್ಥಿಕ  ಪರಿಸ್ಥಿತಿ ಚೆನ್ನಾಗಿತ್ತು ಎಂದು ಯಾವ ಆದಾರದ ಮೇಲೆ ಹೇಳುತಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ತಂದೆ ಹೇಳುತಿದ್ದರು ಆದ್ದರಿಂದ ಹೇಳುತಿದ್ದೇನೆ ಎಂದು ತಿಳಿಸಿರುತಾರೆ. ಸಾಕ್ಷಿಗೆ 2006-07 ರಲ್ಲಿ ನಿಮ್ಮ ತಂದೆ ಸಲ್ಲಿಸಿದ ಐಟಿ ರಿಟನ್ಸ್  ನ ಪ್ರತಿ ಮತ್ತು assessment  order ಮಾಡಿದ ಬಗ್ಗೆ ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ನನಗೆ ತಿಳಿದಿಲ್ಲ ಎಂದು ತಿಳಿಸಿರುತಾರೆ. ಆದ್ದರಿಂದ ಸದ್ರಿ ದಾಖಲೆಯನ್ನು ನಿಶಾನೆಯನ್ನಾಗಿ ಮಾಡಿರುವುದಿಲ್ಲ. ನನ್ನ ತಂದೆಗೆ ಸಿಂಡಿಕೇಟ್ ಬ್ಯಾಂಕ್ , ಕುಂಜಿಬೆಟ್ಟು ಬ್ರಾಂಚ್ ನಲ್ಲಿ ಖಾತೆ

ಇತ್ತು ಎಂದರೆ ಸರಿ . ಸಾಕ್ಷಿಗೆ ನಿಮ್ಮ ತಂದೆಯಾ ಸಿಂಡಿಕೇಟ್ ಬ್ಯಾಂಕ್ ನ ಖಾತೆಯ ಪುಸ್ತಕ ನೋಡಿ ಎಂದು ತೋರಿಸಿದಾಗ ನನಗೆ ಅದರ ಬಗ್ಗೆ ತಿಳಿದಿಲ್ಲ ಎಂದು ತಿಳಿಸಿರುತ್ತಾರೆ . ಆರ್ಥಿಕ ಪರಿಸ್ಥಿತಿ ಬಗ್ಗೆ ತಂದೆಯನ್ನು ಕೇಳಿ ತಿಳಿದುಕೊಂಡವರು ಪಾಸ್ ಪುಸ್ತಕವನ್ನು ಕೇಳಿ ತಿಳಿದುಕೊಂಡಿಲ್ಲವಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮಂ ತಂದೆ ಅವರು ಆಗಿದ್ದರೂ ಕೂಡ ನಮ್ಮನ್ನು ನೋಡಿಕೊಳ್ಳುತಿದ್ದದು, ಸಂಪೂರ್ಣ ನಿರ್ವಹಣೆಯನ್ನು ಮಾಡುತಿದದ್ದು ಮತ್ತು ತಂದೆಯಾಗಿ ನನ್ನ ಅಣ್ಣನೇ ಇದ್ದರು ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಸಿಂಡಿಕೇಟ್ ಬ್ಯಾಂಕ್ ನವರು ಕೊಟ್ಟ ಸರ್ಟಿಫಿಕೇಟ್ ನ್ನು ತೋರಿಸಿ ನಿಮ್ಮ ತಂದೆ ಸಾಲವನ್ನು ತೀರಿಸಿದ ಬಗ್ಗೆ ಬ್ಯಾಂಕ್ ನವರು ಕೊಟ್ಟ ಸರ್ಟಿಫಿಕೇಟ್ ನೋಡಿ ಎಂದು ದಾಖಲೆಯನ್ನು ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ . ನಮ್ಮ ತಂದೆ ನಿವೃತ್ತರಾದ ನಂತರ ಮನೆಯ ಖರ್ಚು ವೆಚ್ಚಗಳನ್ನು ಯಾರು ನೋಡಿಕೊಳ್ಳುತಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ತಾಯಿಯ ಮನೆಯ ಕಡೆಯಿಂದ ರೆಗುಲರ್ ಅಗಿ ಆದಾಯ ಬರುತಿತ್ತು ಮತ್ತು ನಮ್ಮ ತಂದೆಯ ನಿವೃತ್ತಿಯಿಂದ ಬಂದ ಹಣದಲ್ಲಿ ಮನೆಯ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತಿದ್ದರು . ನನ್ನ ತಂದೆಗೆ ನಿವೃತ್ತಿಯಾದಾಗ ಎಷ್ಟು ಹಣ ಬಂದಿತು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ತೀರಿಕೊಂಡ ನಂತರ ಕುಂದಾಪುರದ ಆಸ್ತಿಗಳನ್ನು 2007-08 ರಲ್ಲಿ ಮಾರಾಟ ಮಾಡಿರುತ್ತೇವೆ . ಯಾರೆಲ್ಲಾ ಸೇರಿ ಮಾರಾಟ ಮಾಡಿದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ತಂದೆಯ ಮಕ್ಕಳಾದ ನಾವು ಮಾರಾಟ ಮಾಡಿರುತ್ತೇವೆ . ನಮ್ಮ ಅಣ್ಣನೇ ಎಲ್ಲವನ್ನು

ಮಾಡುತಿದ್ದರು ನಾವು ಸಹಿ ಮಾಡಿರುತ್ತೇವೆ . ಕುಂದಾಪುರದ ಆಸ್ತಿ ನಮ್ಮತಂದೆಗೆ ಅವರ ಹಿರಿಯರಿಂದ ಬಂದಿರುತ್ತದೆ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲನ್ನು ಮದ್ಯಾಹ್ನ ಕ್ಕೆ ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.